ಶ್ರೀ ಸಿದ್ದಯ್ಯ ಕಾಶೀಮಠ್.—1962—63ರಲ್ಲಿ ಪೆಂಡಿಂಗ್ ಆಗಿರುವ ಕೇಸುಗಳು ಮೂರು ವರ್ಷಗಳಾದರೂ ಇನ್ನೂ ಪೆಂಡಿಂಗ್‌ನಲ್ಲಿರುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕೆ ಸಂಬಂಧಪಟ್ಟ ಡಾಕ್ಯುಮೆಂಟುಗಳ ಸಿಕ್ಕದೇ ಇರಬಹುದು ಅಥವಾ ಬೇರೆ ಕಾರಣಗಳಿರಬಹುದು.

---

## Sanction of Irrigation wells in Tumkur District.

*Q.—122. Sri B. BYRAPPAJI (Turuvekere).—

Will the Government be pleased to state :—

(*a*) the number of irrigation wells that were sanctioned in the year 1961-62, 1962-63, 1963-64 in Tumkur District (Talukwise information may be furnished);

(*b*) of those how many are completed ;

(*c*) what is the total extent of land brought under irrigation by these wells ;

(*d*) how many applications are still pending for sanction (year-wise and taluk-wise information may be furnished) ?

*A.*—Sri M V. KRISHNAPPA (Minister for Revenue).—

(*a*) to (*d*) The appended statement contains the required information.

## STATEMENT

| | Taluks | The No. of Irrigation Wells that were sanctioned in the year 1961-62, 1962-63 and 1963-64 in Tumkur District (Taluk-wise Information) | | | The number of wells completed | Total extent of land brought under irrigation by these wells | The number of applications still pending for sanction (year-wise and talukwise information) | | |
|---|---|---|---|---|---|---|---|---|---|
| | | 1961—62 | 1962—63 | 1963—64 | | Acres Guntas | 1961—62 | 1962—63 | 1963—64 |
| 1 | Tumkur ... | 62 | 76 | 23 | 156 | 450-00 | 25 | 30 | 118 |
| 2 | Kunigal ... | — | 41 | 11 | 18 | 250-00 | — | — | 5 |
| 3 | Gubbi ... | — | 68 | 32 | 84 | 414-00 | — | — | 650 |
| 4 | Tiptur ... | — | 91 | 51 | 105 | 135-00 | — | — | 20 |
| 5 | Turuvekere ... | 102 | 92 | 17 | 112 | 224-28 | 12 | 88 | 14 |
| 6 | C. N. Halli ... | — | 18 | 17 | 161 | 970-00 | 60 | 55 | 20 |
| 7 | Madhugiri ... | 50 | 159 | 41 | 171 | 500-00 | — | — | — |
| 8 | Sira ... | 46 | 189 | 29 | 120 | 560-28 | 24 | 196 | 172 |
| 9 | Pavagada ... | 47 | 216 | 40 | 295 | 3,256-00 | — | — | 98 |
| 10 | Koratagere ... | — | 100 | 17 | 105 | 328-00 | 5 | 118 | 169 |
| | Total ... | 307 | 1,113 | 278 | 1,327 | 7,088—16 | 126 | 487 | 1,266 |

ಶ್ರೀ ಬಿ. ಬೈರಪ್ಪಾಜಿ.—ಪಟ್ಟಿಯಲ್ಲಿ ಹೇಳಿರುವಂತೆ 1,698 ಬಾವಿಗಳು ಸರಕಾರದಿಂದ ಮಂಜೂರಾಗಿದ್ದರೂ ಕೂಡ 1963—64 ಹಾಗೂ 1964—65ಕ್ಕೆ ಹಿಂದೆ ಮಂಜೂರಾಗಿದ್ದ ಬಾವಿಗಳ ಕೆಲಸಗಳನ್ನು ಮುಗಿಸಲು ತಕ್ಕ ಕಾರ್ಯಕ್ರಮವನ್ನೇಕೆ ತೆಗೆದುಕೊಳ್ಳಲಿಲ್ಲ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಳೆದ ವರ್ಷದಲ್ಲಿ ಸಂಸ್ಥಾನಾಮಳೆ ಆಹಾರದ ಅಭಾವವಿದ್ದುದರಿಂದ ಬಹಳ ಸಂಖ್ಯೆಯಲ್ಲಿ ಬಾವಿಗಳನ್ನು ತೆಗೆಸಬೇಕೆಂದು ಒಂದು ಸ್ಕೀಮನ್ನು ಹಾಕಿಕೊಂಡು ಸುಮಾರು 15,000 ಬಾವಿಗಳನ್ನು ತೆಗೆಸಬೇಕೆಂದು ಅದಕ್ಕಾಗಿ ಸುಮಾರು ಮೂರೂವರೆ ಕೋಟಿ ಯಷ್ಟು ಹಣವನ್ನು ಕೊಟ್ಟುದರಲ್ಲಿ ಈಗಾಗಲೇ ಒಂದೂವರೆ ಕೋಟಿಯಷ್ಟು ಹೊಸ ಬಾವಿಗಳನ್ನು ತೆಗೆಯುವುದಕ್ಕಾಗಿ ಖರ್ಚಾಗಿದೆ. ಅಲ್ಲದೆ ಈಗ ಹೊಸ ಬಾವಿಗಳನ್ನು ತೆಗೆಯುವುದಕ್ಕೆ ಬದಲಾಗಿ ಹಿಂದೆ ತೆಗೆದಿರುವ ಬಾವಿಗಳ ಕೆಲಸಗಳು ಉಳಿದಿರುವುದರಿಂದ ಅವನ್ನು ಮುಗಿಸಬೇಕೆಂದು ಎಲ್ಲ ಜಿಲ್ಲಾಧಿಕಾರಿಗಳಿಗೂ ಆದೇಶವನ್ನು ಕಳುಹಿಸಿಕೊಡಲಾಗಿದೆ.

ಶ್ರೀ ಕೆ. ಲಕ್ಕಪ್ಪ.—ತುಮಕೂರು ಜಿಲ್ಲೆ ನೀರಾವರಿಯಲ್ಲಿ ಬಹಳ ಹಿಂದುಳಿದಿರುವ ಪ್ರದೇಶವಾಗಿರುವುದರಿಂದ ಇಲ್ಲಿ ನೀರಾವರಿ ಬಾವಿಗಳಿಗೋಸ್ಕರ ಹೆಚ್ಚು ಹಣ ಕೊಡುವುದು ಅವಶ್ಯಕವಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಭಾವವಿರುವ ಪ್ರದೇಶಗಳಲ್ಲಿ ಬಾವಿಗಳಿಗಾಗಿ ಹೆಚ್ಚು ಹಣ ಕೊಡಬೇಕೆಂದು ಇದೆ. ಆದಷ್ಟು ತುಮಕೂರು, ಕೋಲಾರ, ಚಿತ್ರದುರ್ಗ ಹಾಗೂ ಬಿಜಾಪುರ ಈ ಭಾಗಗಳಿಗೆ ಹೆಚ್ಚಿಗೆ ಕೊಡುತ್ತಲಿದ್ದೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—1962ನೇ ಇಸವಿಯಲ್ಲಿ ಬಾವಿಗಾಗಿ ಮಂಜೂರಾಗಿದ್ದದ್ದು ಇನ್ನೂ ಪೂರೈಸಿಲ್ಲದೇ ಇರುವುದರಿಂದ ಅಂತಹ ಬಾವಿಗಳಿಗೆ ಕೊಟ್ಟ ಹಣವನ್ನು ವಾಪಸು ವಸೂಲು ಮಾಡದೇ ಅದನ್ನು ಪುನಃ ಅವರಿಗೇ ಕೊಟ್ಟು ಬೇಗ ಮುಗಿಯುವಂತೆ ಏಕೆ ಕ್ರಮ ತೆಗೆದುಕೊಳ್ಳಬಾರದು ?

ಶ್ರೀ ಎಂ. ವಿ. ಕೃಷ್ಣಪ್ಪ.—ಆದಷ್ಟು ಬಾವಿಗಳನ್ನು ತೆಗೆಸುವ ಕೆಲಸವನ್ನು ಬೇಗನೆ ಮುಗಿಸಬೇಕೆಂದು ಹೇಳುತ್ತಲಿದ್ದೇವೆ. ಅನೇಕ ಸಂದರ್ಭಗಳಲ್ಲಿ ಆಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಕಾಲಾವಕಾಶವನ್ನು ವಿಸ್ತರಿಸುತ್ತೇವೆ.

ಶ್ರೀ ಎಫ್. ಎಸ್. ತಾವರೆ.—ಲಬರಲೈಸ್ಡ್ ಪೆರ್‌ಸ್ಕೀಮಿನಲ್ಲಿ ನಾಲ್ಕೈದು ತಾಲ್ಲೂಕುಗಳನ್ನು ಒಟ್ಟಿಗೆ ಸೇರಿಸಿ ಒಬ್ಬರು ಅಸಿಸ್ಟೆಂಟು ಕಮಿಷನರುಗಳಿಗೆ ನಬ್‌ಸಿಡಿಯನ್ನು ಹಂಚಬೇಕೆಂದು ಕೊಟ್ಟರೆ ಅದು ಸರಿಯಾಗಿ ಹಂಚಿಕೆಯಾಗುವುದಿಲ್ಲ. ಅಲ್ಲದೆ 500 ರೂಪಾಯಿಗಳು ನಬ್‌ಸಿಡಿ ಎಂದು ಈಗ ಕೊಟ್ಟರೆ ಅದರಿಂದ ಕೆಲಸಗಳು ಮುಗಿಯುವುದಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ ವಿ. ಕೃಷ್ಣಪ್ಪ.—ಕೆಲಸಗಳು ಪೂರ್ತಿಯಾಗಿ ಮುಗಿಯದೆ ಇರುವ ಸಂದರ್ಭಗಳಿವೆ. ಆದರೆ ತಾವು ಹೇಳುವ ಹಾಗೆ ಮೂರು ನಾಲ್ಕು ವರ್ಷಗಳಿಂದಲೂ ಹಾಗೆ ನಿಂತಿದ್ದರೆ ಅಂತಹ ಕೇಸುಗಳನ್ನು ನಮ್ಮ ಗಮನಕ್ಕೆ ತನ್ನಿ. ಆದರ ಬಗ್ಗೆ ಸಬ್ಸಿಡಿ ಕೊಡುವುದರ ಬಗ್ಗೆ ತಕ್ಕ ಏರ್ಪಾಡು ಮಾಡಬಹುದು.

ಶ್ರೀ ಪಿ. ವೆಂಕಟಗಿರಿಯಪ್ಪ.—ಕೋಲಾರ ಜಿಲ್ಲೆಯಲ್ಲಿ ಬಾವಿಗಳಿಗಾಗಿ 3,000 ರೂಪಾಯಿಗಳೆಂದು ಕೊಡುವುದು ಅಲ್ಲಿ ಸಾಲದೆ ಒಂದು ಭಾವಿಗೆ ಸುಮಾರು 5,000 ದವರೆಗೆ ಬರುತ್ತದೆ. ಆದುದರಿಂದ ಇಂತಹ ಕಡೆಗಳಲ್ಲಿ ಹಣ ಕೊಡುವಾಗ ಇನ್ನೂ ಹೆಚ್ಚು ಗ್ರ್ಯಾಂಟನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಸ್ಕೀಮಿಗಾಗಿ ಕೇಂದ್ರ ಸರ್ಕಾರದವರು ಗ್ರ್ಯಾಂಟನ್ನು ಕೊಡುತ್ತಿದ್ದಾರೆ. ಆಲ್ಲದೆ ನಾವು ಕೂಡ ಇಂತಹ ಕಡೆಗಳಲ್ಲಿ 5,000 ದಷ್ಟು ಕೊಡಬೇಕೆಂದು ಮಾಡುತ್ತಿದ್ದೇವೆ. ಆದರೆ ಇದೇ ಸ್ಕೀಮು ಮುಂದಿನ ವರ್ಷ ಬರುವ ಸ್ಥಿತಿಯಲ್ಲಲ್ಲ. ಇವುಗಳನ್ನು ಲ್ಯಾಂಡು ಮಾರ್ಟ್ಗೇಜು ಬ್ಯಾಂಕುಗಳು ಹಾಗೂ ಕೋ-ಆಪರೇಟಿವ್ ಸೊಸೈಟಿಗಳ ಮೂಲಕವೇ ಕೊಡಬೇಕೆಂದು ಸರಕಾರ ಒಂದು ತೀರ್ಮಾನಕ್ಕೆ ಬಂದಿದೆ. ಈ ಸ್ಕೀಮು ಮುಂದಿನ ಸಾಲಿಗೆ ಎಕ್ಸ್‌ಟೆಂಡಾಗುವುದಿಲ್ಲ.

ಶ್ರೀ ಬಿ. ಬೈರಪ್ಪಾಜಿ —ಈ ಸ್ಕೀಮಿನಂತೆ ರೈತರಿಗೆ ಅನುಕೂಲ ಮಾಡಬೇಕೆಂದು ಭಾವಿಗಳನ್ನು ಸರಕಾರದವರು ಕೊಡುತ್ತಿರುವಾಗ ತುಮಕೂರು ಜಿಲ್ಲೆಯಲ್ಲಿ ಬಹಳ ಕಡಿಮೆ ಬಾವಿಗಳಿಗಾಗಿ ಮಂಜೂರಾತಿ ಕೊಡಲಾಗಿದೆ. ಇನ್ನೂ ಹೆಚ್ಚು ಬಾವಿಗಳನ್ನು ಮಂಜೂರು ಮಾಡುವುದಕ್ಕೆ ತಕ್ಕ ಕ್ರಮಗಳನ್ನು ಸರಕಾರ ಏರ್ಪಾಡು ಮಾಡುತ್ತದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪೂರ್ತಿಯಾಗದೆ ಇರುವ ಬಾವಿಗಳ ಕೆಲಸವನ್ನು ಮುಗಿಸುವುದಕ್ಕಾಗಿ ತುಮಕೂರು ಜಿಲ್ಲೆಗೆಂದೇ ಹತ್ತು ಲಕ್ಷ ರೂಪಾಯಿಗಳಷ್ಟು ಹಣ ಕೊಡಲಾಗಿದೆ. ಈ ಸ್ಕೀಮು ಮುಂದಿನ ವರ್ಷ ಹೇಗೆ ಬರುತ್ತೋ ಅದರ ರೂಪು ರೇಖೆಗಳನ್ನು ಈಗಲೇ ಹೇಳುವಂತಿಲ್ಲ.

———